ಪಶುವೈದ್ಯ ಸೇವೆಗಳ ಸುಧಾರಣೆ

1200(2369); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಪಶುವೈದ್ಯ ಸೇವೆಗಳ ಸುಧಾರಣೆಗಾಗಿ ಸರ್ಕಾರದವರು ಕೈಗೊಂಡ ಪರಿಣಾಮಕಾರಿ ಕ್ರಮಗಳೇನು; (ವಿವರ ನೀಡುವುದು);

ಆ) ಹಾಗಿದ್ದಲ್ಲಿ, ಸದರಿ ಇಲಾಖೆಯ ಪುನರ್‌ರಚನೆಯನ್ವಯ ಮಾಡಲಾದ ಸುಧಾರಣೆಗಳಾವುವು; ಜಾನುವಾರುಗಳೂ ಹೆಚ್ಚಿನ ಸಂಖ್ಯೆಯಲ್ಲಿರುವ ಹೋಬಳಿ ಪ್ರದೇಶಗಳಲ್ಲಿ ಎಷ್ಟು ಪಶು ಆಸ್ಪತ್ರೆಗಳನ್ನು ನೂತನವಾಗಿ ಪ್ರಾರಂಭಿಸಲಾಗದೆ;

ಇ) ಹಾಗಿದ್ದಲ್ಲಿ, ಸದರಿ ಇಲಾಖೆಗೆ ಮಂಜೂರಾದ ಮತ್ತು ಕೊರತೆ ಇರುವ ಪಶುವೈದ್ಯಾಧಿಕಾರಿಗಳ ಸಂಖ್ಯೆಯೆಷ್ಟು; ಜಿಲ್ಲಾವಾರು ವಿವರ ನೀಡುವುದು?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ)

1) ಹೊಸದಾಗಿ 100 ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಮತ್ತು 100 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಿ ಮಂಜೂರಾತಿ ನೀಡಲಾಗಿದೆ.

2) ಜಾನುವಾರುಗಳ ವಿಶೇಷ ಚಿಕಿತ್ಸೆಗಾಗಿ ಬೆಂಗಳೂರಿನ ದಂಡುಪ್ರದೇಶದ ಆಸ್ಪತ್ರೆ ಅವರಣದಲ್ಲಿ ಅಶುವೈದ್ಯಕೀಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ತುಮಕೂರು, ಗುಲ್ಬರ್ಗಾ, ಮೈಸೂರು ಮತ್ತು

ಬೆಳಗಾವಿಯಲ್ಲಿ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.

3) ರಾಜ್ಯದ ತುಮಕೂರು, ಕೋಲಾರ, ಮೈಸೂರು, ಹಾಸನ, ಉತ್ತರ ಕನ್ನಡ, ವಿಜಯಪುರ, ಕಲಬುರ್ಗಿ ಮತ್ತು ರಾಯಚೂರು ಜಿಲ್ಲೆಗಳ 12 ಹೋಬಳಿಗಳಲ್ಲಿ, 3 ಗ್ರಾಮ ಪಂಚಾಯತಿಗೆ ಒಂದರಂತೆ, ರೈತರ ಮನೆ ಬಾಗಿಲಿಗೆ ಸಂಚಾರಿ ಪಶುಚಿಕಿತ್ಸಾಲಯಗಳ ಮೂಲಕ ಪಶುವೈದ್ಯ ಸೇವೆ ಒದಗಿಸಲು ಕ್ರಮವಹಿಸಲಾಗಿದೆ.

4) ಕಾಲುಬಾಯಿ ಜ್ವರ ರೋಗಕ್ಕೆ ಶೇ.95ರಷ್ಟು ಜಾನುವಾರುಗಳಿಗೆ ಪಲ್ಸ್ ಪೋಲಿಯೋ ಮಾದರಿಯಲ್ಲಿ ಲಸಿಕೆಯನ್ನು ಹಾಕಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ.

5) ಪಶುಪಾಲಕರಿಗೆ ಪಶುವೈದ್ಯಕೀಯ ಸೇವೆಗಳನ್ನು ಪಡೆಯಲು ಸಹಾಯವಾಣಿ (080–23417100) ಪ್ರಾರಂಭಿಸಲಾಗಿದೆ.

6) ರೈತರ ಮನೆ ಬಾಗಿಲಿಗೆ ಪಶುಗಳಿಗೆ ಕೃತಕ ಗರ್ಭಧಾರಣೆ ಸೇವೆ ಒದಗಿಸಲು ಕ್ರಮವಹಿಸಲಾಗಿದೆ.

7) ಇಲಾಖೆಯಲ್ಲಿ 305 ಪಶುವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿದೆ. ಪಶುವೈದ್ಯಕೀಯ ಸಹಾಯಕರ 284 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

8) ಕೋಲಾರ, ಶಿರಾ, ಬಾಗಲಕೋಟೆ ಮತ್ತು ಶಿರಸಿ, ಈ ನಾಲ್ಕು ಕಡೆಗಳಲ್ಲಿ ಪ್ರಾಂತೀಯ ರೋಗ ಪತ್ತೆ ಹಚ್ಚುವ ಪ್ರಯೋಗಾಲಯ ಸ್ಥಾಪಿಸಲಾಗಿದೆ.

9) ಜಾನುವಾರು ರೋಗ ಪ್ರತಿಬಂಧಕ ಲಸಿಕೆ ಹಾಕಲು ಸ್ವಯಂ ಸೇವಕ ವ್ಯಾಕ್ಸಿನೇಟರ್‌ಗಳನ್ನು ಬಳಕೆ ಮಾಡಲು ಮತ್ತು

ಅವರುಗಳಿಗೆ ಪ್ರೋತ್ಸಾಹಧನ ನೀಡಲು ₹ 47.41 ಲಕ್ಷಗಳ ಅನುದಾನ ನೀಡಲಾಗಿದೆ.

10) ಜಾನುವಾರು ರೋಗ ನಿಯಂತ್ರಣಕ್ಕಾಗಿ 44 ಚೆಕ್‌ಪೋಸ್ಟ್‌ಗಳನ್ನು ಮತ್ತು ಸೋಂಕು ರೋಗ ತಡೆಯುವ ಕೇಂದ್ರಗಳನ್ನು ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

11) ರೈತರಿಗೆ ಶೇ.50ರಷ್ಟು ಸಹಾಯಧನದಲ್ಲಿ ಲಿಂಗ ನಿರ್ಧಾರಿತ ವೀರ್ಯ (sexed semen) ನಳಿಕೆಗಳನ್ನು ಒದಗಿಸಲು ಕ್ರಮ ವಹಿಸಲಾಗುತ್ತದೆ.

12) ವಿದೇಶಿದಿಂದ ಹೆಚ್ಚು ಹಾಲು ಉತ್ಪಾದನಾ ಗುಣವಿರುವ ಜೆರ್ಸಿ ಮತ್ತು ಹೆಚ್.ಎಫ್ ವೀರ್ಯ ನಳಿಕೆಗಳನ್ನು ಆಮದು ಮಾಡಿಕೊಂಡು ಕೃತಕ ಗರ್ಭಧಾರಣೆ ಮುಖಾಂತರ ಹೆಚ್ಚು ಹಾಲು ಉತ್ಪಾದನಾ ಸಾಮರ್ಥ್ಯದ ರಾಸುಗಳ ಅಭಿವೃದ್ಧಿಗೆ ಕ್ರಮ ವಹಿಸಲಾಗಿದೆ.

13) ಮೇಕೆಗಳಲ್ಲಿ ಕೃತಕ ಗರ್ಭಧಾರಣೆ ಪ್ರಾರಂಭಿಸಲು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕ್ರಮ ವಹಿಸಲಾಗಿದ್ದು, ಯೋಜನೆ ಅನುಷ್ಠಾನದ ಹಂತದಲ್ಲಿದೆ.

14) ಕುರಿ ಮತ್ತು ಮೇಕೆಗಳಿಗೆ ಮನೆ ಬಾಗಿಲಿಗೆ ಸೇವೆ ಒದಗಿಸಲು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ರಾಜ್ಯಾದ್ಯಂತ 18 Multi-utility Ambulatory Service for Sheep and Goat ಯೋಜನೆ ಪ್ರಾರಂಭಿಸಲು ಕ್ರಮ ವಹಿಸಿದೆ.

ಆ) ಇಲಾಖಾ ಪುನರ್ ರಚನೆ ಅಡಿಯಲ್ಲಿ:

1. ಜಿಲ್ಲಾಮಟ್ಟದಲ್ಲಿ ಪಾಲಿಕ್ಲಿನಿಕ್‌ಗಳನ್ನು ಹೊಸದಾಗಿ ಪ್ರಾರಂಭಿಸಲಾಗಿದೆ. ಉಪ ನಿರ್ದೇಶಕರ ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಲಾಗಿದೆ. ಈ ಆಸ್ಪತ್ರೆಗಳಿಗೆ ಅಗತ್ಯ ಸೌಲಭ್ಯ ಒದಗಿಸಲು ಕೈಗೊಳ್ಳಲಾಗುತ್ತಿದೆ.

2. ಇಲಾಖೆಯಲ್ಲಿ ರೋಗಾಧ್ಯಯನಕ್ಕಾಗಿ ಜಂಟಿ ನಿರ್ದೇಶಕರು (ಎಪಿಡಮಾಲಜಿ) ಹುದ್ದೆ ಹಾಗೂ ವಿವಿಧ ಕಾರ್ಯಕ್ರಮಗಳ ಉಸ್ತುವಾರಿ ಹಾಗೂ ಅಧಿಕಾರದ ವಿಕೇಂದ್ರೀಕರಣಕ್ಕಾಗಿ 4 ಸ್ಥಳಗಳಾದ ಹೆಸರಘಟ್ಟ, ಬೀರೂರು, ಮೈಸೂರು ಮತ್ತು ಧಾರವಾಡದಲ್ಲಿ ಹೊಸದಾಗಿ ವಿಭಾಗ ಮಟ್ಟದ ರಾಜ್ಯವಲಯದಲ್ಲಿ ಜಂಟಿ ನಿರ್ದೇಶಕರ ಹುದ್ದೆಗಳನ್ನು ಸೃಜಿಸಲಾಗಿದೆ. ಕೇಂದ್ರ ಕಛೇರಿಯಲ್ಲಿ ಅಭಿವೃದ್ಧಿ, ಶಿಕ್ಷಣ, ಜಾಗೃತ ಶಾಖೆಗಳನ್ನು ಬಲವರ್ಧನೆಗೊಳಿಸಲು 3 ಅಪರ ನಿರ್ದೇಶಕರ ಹುದ್ದೆಗಳನ್ನು ಸೃಜಿಸಲಾಗಿದೆ.

3. ತರಬೇತಿ ಕೇಂದ್ರಗಳಲ್ಲಿ ಮೇಲಿನ ಹಂತದ ಹುದ್ದೆಗಳನ್ನು ಅಂದರೆ ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರಗಳಿಗೆ ಉಪ ನಿರ್ದೇಶಕರ ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಲಾಗಿದೆ.

4. ಜಾನುವಾರು ಕ್ಷೇತ್ರಗಳಿಗೆ ಡಿ ದರ್ಜೆ ನೌಕರರ ಹುದ್ದೆಗಳನ್ನು ಅಗತ್ಯತೆಗನುಗುಣವಾಗಿ ಮಂಜೂರು ಮಾಡಲಾಗಿದೆ.

5. ಗ್ರಾಮೀಣ ಭಾಗದಲ್ಲಿ ಪಶುವೈದ್ಯರ ಸೇವೆ ಒದಗಿಸುವ ಉದ್ದೇಶದಿಂದ ಸೇವೆಗೆ ಸೇರಿದ ನಂತರ 6 ವರ್ಷಗಳ ಅವಧಿಯವರೆಗೆ ಗ್ರಾಮೀಣ ಭಾಗದಲ್ಲಿ ಸೇವೆ ಕಡ್ಡಾಯವಾಗುವಂತೆ ಸ್ಥಳಗಳನ್ನು ಗುರುತಿಸಲಾಗಿದೆ.

6. ಮುಂಬಡ್ತಿ ಅವಕಾಶವನ್ನು ಹೆಚ್ಚಿಸಲು ಮೇಲಿನ ಹಂತದ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ.

7. ಅನಗತ್ಯ ಯೋಜನೆಗಳಾದ ಪುಲ್ಲೋರಂ ನಿಯಂತ್ರಣ ಘಟಕ, ಕ್ಷಯ ಮತ್ತು ಕಂದು ರೋಗ, ನಾಯಿ ಹುಚ್ಚು ನಿಯಂತ್ರಣ ಘಟಕ, ದೊಡ್ಡ ರೋಗ ನಿವಾರಣಾ ಯೋಜನೆಗಳನ್ನು ಸಂಪೂರ್ಣ ರದ್ದುಪಡಿಸಿ, ಅಗತ್ಯವಿರುವಲ್ಲಿ ಹುದ್ದೆಗಳನ್ನು ಮರುವಿನ್ಯಾಸಗೊಳಿಸಿ, ಮಾನವ ಸಂಪನ್ಮೂಲಗಳನ್ನು ಪ್ರಯೋಜನಕಾರಿಯಾಗಿ ಬಳಸಲಾಗಿದೆ.

2014–15ನೇ ಸಾಲಿನಲ್ಲಿ ಹೊಸದಾಗಿ 100 ಪಶುಚಿಕಿತ್ಸಾಲಗಳನ್ನು ಮಂಜೂರು ಮಾಡಲಾಗಿದೆ ಹಾಗೂ 100 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗಿದೆ.

ಇ) ಇಲಾಖೆಯಲ್ಲಿ 2595 ಪಶುವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿದ್ದು, 1945 ಹುದ್ದೆಗಳು ಭರ್ತಿಯಾಗಿವೆ ಹಾಗೂ 650 ಹುದ್ದೆಗಳು ಖಾಲಿಯಿದೆ.

ಜಿಲ್ಲಾವಾರು ವಿವರ **ಅನುಬಂಧದಲ್ಲಿ** ನೀಡಿದೆ.

ವಿಧಾನಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2369ಕ್ಕೆ ಅನುಬಂಧ

---*---

31-05-2015 ರಲ್ಲಿದ್ದಂತೆ ಪಶುವೈದ್ಯಾಧಿಕಾರಿಗಳ ಹುದ್ದೆಗಳ ವಿವರ
(30 ಜಿಲ್ಲೆಗಳು ಹಾಗೂ ಹಾನುವಾರು ಕ್ಷೇತ್ರಗಳು/ ರಾಜ್ಯಮಟ್ಟದ ಕಛೇರಿಗಳು)

ಕ್ರ.ಸಂ.	ಜಿಲ್ಲೆಯ ಹೆಸರು	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಹುದ್ದೆ
1	ಬೆಂಗಳೂರು ನಗರ ಜಿಲ್ಲೆ	74	70	4
2	ಬೆಂಗಳೂರು ಗ್ರಾ. ಜಿಲ್ಲೆ	49	45	4
3	ತುಮಕೂರು	143	117	26
4	ಚಿತ್ರದುರ್ಗ	75	57	18
5	ದಾವಣಗೆರೆ	91	79	12
6	ಕೋಲಾರ	71	58	13
7	ಶಿವಮೊಗ್ಗ	92	72	20
8	ಚಿಕ್ಕಬಳ್ಳಾಪುರ	66	56	10
9	ರಾಮನಗರ	63	57	6
10	ಮೈಸೂರು	98	78	20
11	ಚಾಮರಾಜನಗರ	44	29	15
12	ದಕ್ಷಿಣ ಕನ್ನಡ	53	39	14
13	ಉಡುಪಿ	33	26	7

14	ಹಾಸನ	106	60	46
15	ಚಿಕ್ಕಮಗಳೂರು	84	70	14
16	ಮಂಡ್ಯ	114	79	35
17	ಕೊಡಗು	33	24	9
18	ಬೆಳಗಾವಿ	188	113	75
19	ವಿಜಯಪುರ	81	63	18
20	ಬಾಗಲಕೋಟೆ	92	70	22
21	ಧಾರವಾಡ	62	44	18
22	ಗದಗ್	70	45	25
23	ಹಾವೇರಿ	84	56	28
24	ಉತ್ತರ ಕನ್ನಡ	104	40	64
25	ಕಲ್ಬುರ್ಗಿ	132	61	71
26	ಯಾದಗಿರಿ	55	11	44
27	ಬಳ್ಳಾರಿ	107	35	72
28	ಬೀದರ್	100	90	10
29	ರಾಯಚೂರು	76	24	52
30	ಕೊಪ್ಪಳ	69	33	36
31	ರಾಜ್ಯಮಲಯ/ಇತರೆ	86	80	6
	ಒಟ್ಟು	**2595**	**1781**	**814**
	ಅನ್ಯ ಸೇವೆ ನಿಯೋಜನೆ ಮೇಲೆ ಹಾಗೂ ಪಶುವೈದ್ಯಕೀಯ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ಸ್ನಾತಕೋತ್ತರ ಪದವಿ ವ್ಯಾಸಂಗಕ್ಕೆ ನಿಯೋಜನೆಗೊಂಡ ಅಧಿಕಾರಿಗಳಿಗೆ ಮೀಸಲಿಟ್ಟ ಖಾಲಿ ಹುದ್ದೆಗಳು			164
	ಪ್ರಸ್ತುತ ಇಲಾಖೆಯಲ್ಲಿ ಖಾಲಿ ಇರುವ ಒಟ್ಟು ಹುದ್ದೆಗಳು			650